ಮೇಃ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ

ಸಿ.ಸಿ ನಂ-1240/2018

ಚಾಸಾ-2 ಪ್ರಾಸಾ-1

| | |
|---|---|
| ಹೆಸರು | ಶಿವಕುಮಾರ ಈರಪ್ಪ ವಿಜಾಪೂರ |
| ತಂದೆಯ ಹೆಸರು | ಈರಪ್ಪ ವಿಜಾಪೂರ |
| ವಯಸ್ಸು | 46 ವರ್ಷ |
| ಉದ್ಯೋಗ | ಗ್ರಾಮ ಲೆಕ್ಕಾಧಿಕಾರಿ |
| ವಾಸ ಸ್ಥಳ | ಹಲಗಲಿ. |

**ದಿನಾಂಕಃ 20-12-2022 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ- ಶ್ರಿ. ಎ.ಪಿ.ಪಿ., ರವರಿಂದ ಃ**

ಚಾಸಾ-4 ಮತ್ತು 7 ರ ಪರಿಚಯವಿದೆ.

ದಿ: 26-06-2018 ರಂದು ಬೆಳಿಗ್ಗೆ 8 ರಿಂದ 9-30 ಗಂಟೆಯವರೆಗೆ ಚಾಸಾ-೭ ರವರು ತೋರಿಸಿದ ಮುಧೋಳ ಶಹರದ ರನ್ನ ಕ್ರೀಡಾಂಗಣದ ಕಟ್ಟೆಯ ಹತ್ತಿರ ನನ್ನ ಮತ್ತು ಚಾಸಾ-4 ರ ಸಮಕ್ಷಮ ಪೊಲೀಸರು ಪಂಚನಾಮೆಯನ್ನು ಜರುಗಿಸಿ ಪೋಟೋಗಳನ್ನು ತೆಗೆದುಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ- ೧ ಎಂದು, ಅದರಲ್ಲಿನ ಸಾಕ್ಷಿ ಸಹಿಯನ್ನು ನಿಪಿ-೧ ಎ ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ ೮ ಪೋಟೋಗಳನ್ನು ನೋಡಿ ಸಾಕ್ಷಿಯು ಗುರುತಿಸಿದ್ದು, ಅವುಗಳನ್ನು ನಿಪಿ-೨ ರಿಂದ ೯ ಎಂದು ಗುರುತಿಸಲಾಯಿತು. ನಿಪಿ-೨ ರಿಂದ ೯ ಕ್ಕೆ ಸಂಬಂಧಪಟ್ಟಂತೆ ಒಂದು ಸಿಡಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-೧೦ ಗುರುತಿಸಲಾಯಿತು. ಪೊಲೀಸರು ಪಂಚನಾಮೆ ಕಾಲಕ್ಕೆ ಒಂದು ಟೇಬಲ ಮತ್ತು ೧೦ ಪ್ಲಾಸ್ಟೀಕ ಕುರ್ಚಿಗಳನ್ನು ನಮ್ಮ ಸಮಕ್ಷಮ ಜಪ್ತು ಪಡಿಸಿಕೊಂಡಿರುತ್ತಾರೆ. ಸದರಿ ಒಂದು ಟೇಬಲ ಮತ್ತು ೧೦ ಪ್ಲಾಸ್ಟೀಕ ಕುರ್ಚಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಮು.ಮಾ ೧ ರಿಂದ ೧೧ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ :**

ಪೊಲೀಸರು ಮತ್ತು ಚಾಸಾ-೭ ರವರು ಕೂಡಿ ನನಗೆ ಮತ್ತು ಚಾಸಾ-4 ರನ್ನು ಪಂಚರನ್ನಾಗಿ ನೇಮಿಸಿ ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರು. ಘಟನಾ ಸ್ಥಳದ ಬಗ್ಗೆ ನನಗೆ ಸ್ವಂತಕ್ಕೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ. ಪೊಲೀಸರು ನನಗೆ ಸಹಿ ಮಾಡು ಎಂದಿದಕ್ಕೆ ನಾನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು ನನ್ನ ಸಮಕ್ಷಮ ಪಂಚನಾಮೆ ಜರುಗಿಸಿ ನನಗೆ ಓದಿ ತಿಳಿಸಿದ ನಂತರ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಪಂಚನಾಮೆ ಕಾಲಕ್ಕೆ ಪೊಲೀಸರಿಗೆ ನಾನು ಯಾವುದೇ ರೀತಿಯ ಮಾಹಿತಿ ನೀಡಿಲ್ಲ. ರನ್ನ ವೈಭವ ಕಾರ್ಯಕ್ರಮದಲ್ಲಿ ಘಟನೆ ಆದಾಗ ಎಷ್ಟು ಜನ ಸೇರಿದ್ದರು ಎಂದರೆ ನನಗೆ ಗೊತ್ತಿಲ್ಲ. ಪಂಚನಾಮೆ ಕಾಲಕ್ಕೆ ಘಟನಾ ಸ್ಥಳದಲ್ಲಿ ಎಷ್ಟು ಟೇಬಲ ಮತ್ತು ಕುರ್ಚಿಗಳು ಇದ್ದವು ಎಂದು ಹೇಳಲು ನನಗೆ ಬರುವುದಿಲ್ಲ. ನನ್ನ ಸಮಕ್ಷಮ ಪಂಚನಾಮೆ ಮಾಡಿದಾಗ ಅಲ್ಲಿ ೧ ಟೇಬಲ ಮತ್ತು ೧೦ ಪ್ಲಾಸ್ಟೀಕ ಕುರ್ಚಿಗಳಿದ್ದವು. ಸದರಿ ಟೇಬಲ ಮತ್ತು ಕುರ್ಚಿಗಳನ್ನು ನನ್ನ ಸಮಕ್ಷಮ ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು ೧೦ ಕುರ್ಚಿಗಳಿಂದ ಅವುಗಳ ಚೂರುಗಳನ್ನು ಜಪ್ತುಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಪಂಚನಾಮೆ ಬಗ್ಗೆ ನನಗೆ ಸ್ವಂತಕ್ಕೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಮು.ಮಾ ೧ ರಿಂದ ೧೧ ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ

ನಡೆದಿಲ್ಲದಿದ್ದರೂ ಸಹಿತ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಾರ್ವಜನಿಕ ಅಧಿಕಾರಿಯಾಗಿರುವುದರಿಂದ ಸರಕಾರಕ್ಕೆ ಅನುಕೂಲವಾಗಲೇಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ನ್ಯಾಯಾಧೀಶರು ವ ಜೆಎಂಎಫ್‌ಸಿ
ಮುಧೋಳ.

**ಸಾಕ್ಷಿಯ ಸಹಿ**